ಜೂ.15ರಿಂದ
ಆ.15 ರವರೆಗೆ
ರಾಜ್ಯಾದ್ಯಂತ
ಜಾಗೃತಿ
400ಕ್ಕೂ ಹೆಚ್ಚು
ಸಂಘ ಸಂಸ್ಥೆಗಳ
ಸಹಕಾರ



# ಹಸಿರ ನೆಟ್ಟರೆ ಉಸಿರು

## ರಾಜ್ಯಾದ್ಯಂತ 1ಕೋಟಿ ಗಿಡ ನೆಡುವ ಬೃಹತ್ ಅಭಿಯಾನ



ರಾಜೇಶ್ ಪದ್ಮಾರ್
ಉಪನ್ಯಾಸಕ

ರಾಜಸ್ಥಾನದ ನಂತರ ಭಾರತದಲ್ಲಿ ಅತಿಹೆಚ್ಚು ಹಾಗೂ ಅತಿವೇಗವಾಗಿ ಒಣಮರುಭೂಮಿಯಾಗುತ್ತಿರುವ (desertification) ರಾಜ್ಯ ಕರ್ನಾಟಕ ಎಂಬ ಆತಂಕಕಾರಿ ಸುದ್ದಿ ನೀವು ಓದಿರಬಹುದು. ಕಳೆದ ಮೂರ್ನಾಲ್ಕು ದಶಕಗಳಿಂದ ನಾನಾ ಕಾರಣಕ್ಕಾಗಿ ನಮ್ಮ ರಾಜ್ಯದ ಹಸಿರ ಹೊದಿಕೆ ಗಣನೀಯ ಪ್ರಮಾಣದಲ್ಲಿ ಕುಸಿದಿದೆ. ಒಂದೊಮ್ಮೆ 'ಸುಂದರ ನದಿ ವನಗಳ ನಾಡೇ', 'ನಿತ್ಯ ಹರಿದ್ವರ್ಣವನದ ತೇಗ ಗಂಧ ತರುಗಳ ನಾಡು' ಎಂದು ಹಿರಿಯ ಕವಿಗಳಿಂದ ಕರೆಯಿಸಿಕೊಂಡಿದ್ದ ನಮ್ಮ ಕನ್ನಡ ನೆಲ ಇದೀಗ ಪ್ರಾಕೃತಿಕವಾಗಿ ಸೊರಗಿದೆ. ಕನ್ನಡ ನೆಲವನ್ನು ಮತ್ತೆ ಹಸಿರಾಗಿಸುವ ಬೃಹತ್ ರಾಜ್ಯವ್ಯಾಪಿ ಅಭಿಯಾನವೊಂದು ಜೂನ್ ತಿಂಗಳಿನಿಂದ ನಡೆಯಲಿದೆ.

ಪರಿಸರ ಸಂರಕ್ಷಣೆ ಹಾಗೂ ಹಸಿರ ಹೊದಿಕೆ ಹೆಚ್ಚಿಸುವ ಉದ್ದೇಶದಿಂದ ಸಮರ್ಥ ಭಾರತ ಸಂಸ್ಥೆಯು ಮುಂದಿನ ಜೂನ್ 15ರಿಂದ ಆಗಸ್ಟ್ 15ರವರೆಗೆ ರಾಜ್ಯಾದ್ಯಂತ 1 ಕೋಟಿ ಗಿಡ ನೆಡುವ ಬೃಹತ್ ಅಭಿಯಾನ ಹಮ್ಮಿಕೊಂಡಿದೆ. ಈ ಅಭಿಯಾನಕ್ಕೆ ರಾಜ್ಯದ ಸುಮಾರು 400ಕ್ಕೂ ಹೆಚ್ಚು ಸಂಘ ಸಂಸ್ಥೆಗಳು ಕೈಜೋಡಿಸಲಿವೆ. ರಾಜ್ಯಾದ್ಯಂತ ಸುಮಾರು 1 ಕೋಟಿಗೂ ಅಧಿಕ ಗಿಡ ನೆಡುವ ಪ್ರಕ್ರಿಯೆಗೆ ಈಗಾಗಲೇ ಅರಣ್ಯ ಇಲಾಖೆ, ತೋಟಗಾರಿಕಾ ಇಲಾಖೆ ಗಿಡಗಳನ್ನು ಕೊಡುಗೆ ನೀಡುವುದಾಗಿ ಬರವಸೆ ನೀಡಿದ್ದಾರೆ. ಈಗಾಗಲೇ

